IJNRD.ORG ISSN : 2456-4184
INTERNATIONAL JOURNAL OF NOVEL RESEARCH AND DEVELOPMENT (IJNRD) | IJNRD.ORG
An International Open Access, Peer-reviewed, Refereed Journal

# ಕೊಪ್ಪಳ ಪ್ರದೇಶದ ಶಾಸನೋಕ್ತ ಘೈಸಾಸರು

**ಡಾ. ಮಹಾದೇವಿ ಆರ್. ಹಿರೇಮಠ**
ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.

ಇಂದಿನ ಕಲ್ಯಾಣ ಕರ್ನಾಟಕದ ಜಿಲ್ಲಾ ಕೇಂದ್ರವಾದ ಕೊಪ್ಪಳ ಅಥವಾ ಪ್ರಾಚೀನ ಕರ್ನಾಟಕದಲ್ಲಿ ಕೊಪಣನಗರ ಮಹಾಕೊಪಣನಗರವೆಂದು ಗುರುತಿಸಲ್ಪಡುತ್ತಿದ್ದ ಕೊಪ್ಪಳವು ಸಾಮಾಜಿಕ, ರಾಜಕೀಯ, ಧಾರ್ಮಿಕ, ಶಿಕ್ಷಣ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಪ್ರಾಚೀನ ಕಾಲದಿಂದಲೂ ಇತಿಹಾಸದ ಕಾಲಘಟ್ಟದಲ್ಲಿ ಅನೇಕ ತಿರುವುಗಳಲ್ಲಿ ಸ್ಥಿರವಾಗಿ ನಿಂತು ಅಪಾರ ಕೊಡುಗೆಯನ್ನು ನೀಡಿದ್ದು ಇದು ಅಧ್ಯಯನಾಸಕ್ತರಿಗೆ ಸಂಶೋಧಕರಿಗೆ, ಆಕರವಾಗಬಲ್ಲ ಅನೇಕ ಪ್ರಾಚೀನ ಐತಿಹಾಸಿಕ ಅಂಶಗಳನ್ನು ತನ್ನೊಡಲಲ್ಲಿ ಬಚ್ಚಿಟ್ಟುಕೊಂಡಿದೆ. ಈ ಹಿನ್ನೆಲೆಯಲ್ಲಿ ನಮ್ಮೆದುರೇ ಇದ್ದು ನಮಗೆ ಸ್ಪಷ್ಟವಾಗಿ ಅರ್ಥವಾಗದಿರುವ ಅಥವಾ ನಮ್ಮ ಅಧ್ಯಯನದ ಹಿಡಿತಕ್ಕೆ ಸಿಕ್ಕದೇ ಇರುವ ಈಗ ಚರ್ಚಿಸಲ್ಪಡುತ್ತಿರುವ ಪ್ರಾಚೀನ ಐತಿಹಾಸಿಕ ವಿಷಯ 'ಕೊಪ್ಪಳ ಪ್ರದೇಶದ ಶಾಸನೋಕ್ತ ಘೈಸಾಸರು ಅಥವಾ ಘೈಸಾಸಿ ಎಂಬುದು. ಆಧುನಿಕ ಕೊಪ್ಪಳ ಜಿಲ್ಲೆ ಎಂದು ಕರೆಯಲ್ಪಡುವ ಈ ಜಿಲ್ಲೆಯಲ್ಲಿ ಇದುವರೆಗೆ ಒಟ್ಟು 443 ಶಾಸನಗಳು ಪ್ರಕಟವಾಗಿದ್ದು ಕೊಪ್ಪಳ ತಾಲೂಕಿನ ಅಳವಂಡಿ, ಕೂವಲೂರು ಅಥವಾ ಕೌಲೂರು, ಮಾದಿನೂರು, ಯಲಬುರ್ಗಿ ತಾಲೂಕಿನ ಇಟಗಿ, ಕುಕನೂರು, ತಳಕಲ್ಲ, ಮುದೋಳ, ಬಳಗೇರಿ ಕುಷ್ಟಗಿ ತಾಲೂಕಿನ ಚಳಗೇರಿ ಶಾಸನಗಳಲ್ಲಿ ಅಗ್ರಹಾರಗಳು ಬಗ್ಗೆ ಉಲ್ಲೇಖ ಬರುತ್ತಿದ್ದು ಇದರಲ್ಲಿ ಕೆಲವು ಸ್ಥಳಗಳು ಘಟಿಕಾ ಸ್ಥಾನಗಳಾಗಿದ್ದ ಬಗ್ಗೆ ಶಾಸನಗಳ ಅಧ್ಯಯನದಿಂದ ತಿಳಿದು ಬರುತ್ತದೆ.

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಶಿವಪುರಿ, ಮಠಗಳು, ದೇವಾಲಯಗಳು ಅಗ್ರಹಾರಗಳು, ಬ್ರಹ್ಮಪುರಿಗಳು ಘಟಿಕಾಸ್ಥಾನಗಳಾಗಿ ಪ್ರಾಥಮಿಕ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ವಿದ್ಯಾಭ್ಯಾಸದಂಥ ಚಟುವಟಿಕೆಗಳು ನಡೆಯುವ ಶಿಕ್ಷಣದ ಕೇಂದ್ರಗಳಾಗಿದ್ದವು. ಅಗ್ರಹಾರಗಳು ವೈದಿಕ ಸಂಪ್ರದಾಯದ ವಿದ್ಯಾಕೇಂದ್ರಗಳಾಗಿ ಮಹಾಜನರು ಮಹಾವಿದ್ವಾಂಸರು, ಚರ್ಚಿಸುವ ಸ್ಥಳವಾದ ಬ್ರಹ್ಮಪುರಿಗಳು ನಗರಗಳಲ್ಲಿ ಪಟ್ಟಣಗಳಲ್ಲಿ ಬ್ರಾಹ್ಮಣ ವಿದ್ವಾಂಸರು ವಾಸಿಸುವ ಭಾಗವಾಗಿದ್ದವು. ಪ್ರಾಚೀನ ಕಾಲದಲ್ಲಿ ಹಳ್ಳಿಗಳ ಸಂಖ್ಯೆ ಹೆಚ್ಚು, ನಗರಗಳ ಸಂಖ್ಯೆ ಕಡಿಮೆ. ಅಗ್ರಹಾರಗಳಲ್ಲಿ ಬ್ರಾಹ್ಮಣರು, ಆ ಊರುಗಳ ಒಡೆಯರು, ಬ್ರಹ್ಮಪುರಿಗಳಲ್ಲಿ ಬ್ರಾಹ್ಮಣರು ಆ ಊರಿನ ಇತರ ಪಂಗಡಗಳ ಜನರಿರುತ್ತಿದ್ದರು. ಅಲ್ಲದೆ ಇದು ಬ್ರಾಹ್ಮಣರು ಒಂದೆಡೆ ಸೇರುತ್ತಿದ್ದ ಸಾರ್ವಜನಿಕ ಮಂದಿರವಾಗಿತ್ತು. ಅಂದರೆ, ಉಪಾಧ್ಯಾಯರು, ವಿದ್ವಾಂಸರು ವಿದ್ಯಾರ್ಥಿಗಳು ಒಟ್ಟಾಗಿ ಸೇರಿ ಪರಸ್ಪರ ಚರ್ಚೆಯಿಂದ ಧರ್ಮದ ವಿಷಯದಲ್ಲಿ ಹೆಚ್ಚಿನ ಜ್ಞಾನವನ್ನು ಪಡೆಯಲು ಸಾಧ್ಯವಾಗಿಸಿದ್ದ ಸಂಸ್ಥೆ

ಇದಾಗಿತ್ತು. ಘಟಿಕಾ ಸ್ಥಾನವು ಸಹ ಅಗ್ರಹಾರ, ದೇವಾಲಯಗಳಲ್ಲಿ ಒಂದು ಅಂಗವಾಗಿತ್ತು. ವಿದ್ವಾಂಸರು ಗಮನಿಸಿದಂತೆ ಘಟಿಕಾ ಸ್ಥಾನಗಳು ಉಚ್ಚ ಶಿಕ್ಷಣದ ವಿದ್ಯಾಭ್ಯಾಸದ ಕೇಂದ್ರವಾಗಿದ್ದವು. ಇಲ್ಲಿ ವಿದ್ವಾಂಸರು ಚರ್ಚೆ, ವಾದ–ವಿವಾದಗಳಲ್ಲಿ ತೊಡಗಿರುತ್ತಿದ್ದರು. ಈ ಚರ್ಚೆಗಳಲ್ಲಿ ತೊಡಗಿದವರನ್ನು ಶಾಸನಗಳಲ್ಲಿ ಘಟಿಕಾವಾದಿ, ಘಟಿಕಾಸಾಹಸಿ>ಘಟಿಕಾಸಾಹಸ, ಘಳಿಸಾಸ>ಘೈಸಾಸ ಎಂದು ಕರೆದಿರಬೇಕು, ಈ ಹೆಸರು ಇಂದಿನ ಮಹಾರಾಷ್ಟ್ರದಲ್ಲಿ ಉಳಿದುಕೊಂಡಿದ್ದು ಅದು ಪ್ರಾಚೀನ ಸಾಂಸ್ಕೃತಿಕ ಶ್ರೀಮಂತಿಕೆ ಪ್ರತೀಕವಾಗಿದೆ ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಒಟ್ಟಾರೆ ಹೇಳುವುದಾದರೆ ಅಲ್ಲಿನ ಚರ್ಚೆ ವಾದಗಳು ವಿದ್ವಾಂಸರ ಬುದ್ದಿವಂತಿಕೆ, ವಿದ್ಯಾಸಾಮರ್ಥ್ಯ ಪ್ರತಿಭೆ ಇತ್ಯಾದಿಗಳ ಪರೀಕ್ಷೆಗೆ ಗುರಿಯಾಗಿದ್ದವೆಂದು ತಿಳಿಯುತ್ತದೆ. ಅಂತಹ ಪರೀಕ್ಷೆಗಳಲ್ಲಿ ಜಯಶಾಲಿಯಾದವನಿಗೆ ಇಂತಹ ಬಿರುದಿನಿಂದ ಕರೆಯುತ್ತಿದ್ದರೆಂದು ಡಾ.ಚಿದಾನಂದಮೂರ್ತಿಯವರು ಸಹ ಸ್ಪಷ್ಟ ಪಡಿಸಿದ್ದಾರೆ. ಇದನ್ನೇ ಬಲವಾಗಿ ಪ್ರತಿಪಾದಿಸುತ್ತ ಡಾ.ಎಚ್.ಎಸ್. ಗೋಪಾಲರಾವ್ ಅವರು ಘಟಿಕಾಸ್ಥಾನಗಳಲ್ಲಿ ನಡೆಸಲಾಗುತ್ತಿದ್ದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗೆಲವು, ಪಡೆದವನೇ ಘಟಿಕಾ ಸಾಹಸಿ. ಘಟಿಕಾ ಸಾಹಸಿಯೇ ಘಳಿಸಾಸಿ. ಘೈಸಾಸ>ಘೈಸಾಸಿ ಎಂದಾಗಿರಬೇಕೆಂದು ಸಮರ್ಥಿಸಿರುವುದು ಸೂಕ್ತವೆನಿಸುತ್ತದೆ.

ಪ್ರಸ್ತುತ ಕೊಪ್ಪಳ ಜಿಲ್ಲೆಯ ಹನುಮನಾಳ ಶಾಸನದಲ್ಲಿ 64 ಘಟಿಕಾಸ್ಥಾನ ಪಟ್ಟಣಗಳಿದ್ದವೆಂದು ತಿಳಿಸುತ್ತದೆ. ಇನ್ನೊಂದು ಕಡೆ ಶ್ರೀ ಗೋಪಾಲರಾವ್ ಅವರು ಸಹ ಕಲ್ಯಾಣ ಚಾಲುಕ್ಯರ ಕಾಲದಲ್ಲಿ 64 ಘಟಿಕಾಸ್ಥಾನಗಳಿದ್ದವೆಂದು ತಿಳಿಸಿರುವ ಅಂಶವನ್ನು ಗಮನಿಸಲಾಗಿ ಅವುಗಳು ಯಾವವು ಎಲ್ಲೆಲ್ಲಿ ಇದ್ದವೆಂದು ಗುರ್ತಿಸುವ ಕೆಲಸ ಆಗಬೇಕಾಗಿದೆ. ಆ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಶಾಸನಗಳನ್ನು ಸಂಶೋಧಿಸಿ ಪರಿಶೀಲಿಸಲಾಗಿ ಈ ಜಿಲ್ಲೆಯ ಮಾದಿನೂರು–6, ಕೂಕನೂರು–7 ಇಟ್ಟಿಗೆ–8 ಅಗ್ರಹಾರ ಮತ್ತು ಬ್ರಹ್ಮಪುರಿ ಘಟಿಕಾಸ್ಥಾನಗಳಾಗಿದ್ದವೆಂದು ತಿಳಿದುಬರುತ್ತದೆ. ಈ ವಿದ್ಯಾ ಸಂಸ್ಥೆಗಳು ಮಠಗಳು, ದೇವಾಲಯಗಳಿಗೆ ಹೊಂದಿಕೊಂಡಿರುವವರಿಂದ ಅಲ್ಲಿರುವ ಶಿವ, ವಿಷ್ಣು, ಮತ್ತು ಆದಿತ್ಯ ಅಥವಾ ಸರಸ್ವತಿ, ದೇವಾಲಯ ಪುರುಷರ ದೇವರುಗಳ ಶಾಲೆಗಳೇ ಅಗ್ರಹಾರ, ಬ್ರಹ್ಮಪುರಿಗಳು ಘಟಿಕಾಸ್ಥಾನಗಳಾಗಿ ರೂಪುಗೊಂಡಿರುವುದರಿಂದ ಅಲ್ಲಿಯ ವಿದ್ವಾಂಸರು ಆಯಾ ದೇವರುಗಳ ಹೆಸರುಗಳನ್ನು ತಮ್ಮ ಹೆಸರಿನ ಹಿಂದೆ ಬಿರುದುಗಳಾಗಿ ಸೇರಿಸಿಕೊಂಡಿರಬೇಕೆಂದು ಕಂಡುಬರುತ್ತದೆ. ಕೆಲವು ವಿದ್ವಾಂಸರ ಹೆಸರುಗಳ ಹಿಂದೆ ಘಟಿಕಾಸಾಹಸಿ ಎಂಬ ವಿಶೇಷಣ ಇರುವುದನ್ನು ಉದಾಹರಣೆ ಸಹಿತವಾಗಿ ಡಾ. ಚಿದಾನಂದಮೂರ್ತಿಯವರು ಕ್ರಿ.ಶ. 1213ರ ಶಾಸನದಲ್ಲಿ ಉಲ್ಲೇಖ ಬರುವ ಮಾಧವಶರ್ಮನ ಹೆಸರಿನಿಂದ ಆತ ಘಟಿಕಾಸಾಹಸಿ ಆಗಿದ್ದನೆಂದು ಸ್ಪಷ್ಟಪಡಿಸಿದ್ದಾರೆ. ಅಂದರೆ ಘಟಿಕಾಸ್ಥಾನಗಳಲ್ಲಿ ಜ್ಞಾನದ ಸಾಹಸವನ್ನು ಪ್ರದರ್ಶಿಸಿದವನು ಎಂದು ಆ ವಿಶೇಷಣಕ್ಕೆ ಅರ್ಥ ಮಾಡಬೇಕಾಗುತ್ತದೆ. ಹಾಗೂ ವಿದ್ವಾಂಸರು ಇತರ ವಿದ್ವಾಂಸರನ್ನು ಈಗಿನಂತೆ ಶಾಸ್ತ್ರಾರ್ಥಕ್ಕೆ ಕರೆಯುತ್ತಿದ್ದರು. ಆ ಶಾಸ್ತ್ರಾರ್ಥಗಳು ಇಂತಹ ಘಟಿಕಾಸ್ಥಾನಗಳಲ್ಲಿ ನಡೆಯುತ್ತಿದ್ದವು.

ಹೀಗಾಗಿ ಅಲ್ಲಿ ಜಯಶಾಲಿ ಆದವನನ್ನು ಅಲ್ಲಿಯ ಘಟಿಕಾಸ್ಥಾನದ ಆ ದೇವರುಗಳ ಹೆಸರಿನಿಂದ ಅವರನ್ನು ಕರೆದಿರಬೇಕು. ಬೇರೆ ಜಿಲ್ಲೆಯ ಅಂಥ ಶಾಸನಗಳಲ್ಲಿ ಉಲ್ಲೇಖಗಳು ಸಿಗುತ್ತವೆ. ಉದಾಹರಣೆಗಾಗಿ ವಿಷ್ಣುದೇವ ಘಟಿಕಾವಾದಿ ಎಂಬ ಉಲ್ಲೇಖ ನಾಡಿನ ಬೇರೆ ಶಾಸನಗಳಲ್ಲಿ ಕಂಡುಬರುತ್ತದೆ. ಮತ್ತು ಆ ಕಾಲದ ವಿದ್ವಾಂಸರ ವಿಶೇಷಣಗಳಲ್ಲಿ ಪರವಾದಿ ಭಯಂಕರ ಇತ್ಯಾದಿ ಅಂಶಗಳು ಗಮನಿಸಿದ ಆಗಿನ ಜನರು ಇವರನ್ನು ಘಟಿಕಾಸ್ಥಾನದಲ್ಲಿ ಮನ್ನಣೆ ಪಡೆದವನು ವಿದ್ವತ್ತಿನ

ಶಿಖರವನ್ನು ಮುಟ್ಟಿದವನು ಎಂದು ಭಾವಿಸಿರಬೇಕು. ಆದ್ದರಿಂದ ಶಾಸನಗಳಲ್ಲಿ ಕಂಡು ಬರುವ ಘಟಿಕಾ ಸಾಹಸಿ ಎಂಬುದೆ ಘಳಿಸಾಸ, ಫೈಸಾಸ ಎಂದಾಗಿ ಫೈಸಾಸ, ಫೈಸಾಸಿ ಆಗಿರಬೇಕೆಂಬುದೇ ನನ್ನ ಅಭಿಪ್ರಾಯವೂ ಆಗಿದೆ.

ಕೊಪ್ಪಳ ಜಿಲ್ಲೆಯ ಕುಕನೂರಿನ ಶಾಸನದಲ್ಲಿ ಉಲ್ಲೇಖ ಬಂದಿರುವ ವಾಸುದೇವ ಫೈಸಾಸ ಎಂಬ ವಿದ್ವಾಂಸನ ಹೆಸರು ಹರಿಹರನ ಬಸವರಾಜದೇವರ ರಗಳೆಯಲ್ಲಿ ವಾಸುದೇವ ಫೈಸಾಸರ, ಕೇಶವಭೈಸಾಸರ ಹೆಸರಿರುವುದನ್ನು ತಿಳಿಯ ಬಹುದಾಗಿದೆ. ಅದೇ ಊರಿನ ಕ್ರಿ.ಶ. 1127ರ ಶಾಸನದಲ್ಲಿ 11 ಅಗ್ರಹಾರ ಕುಕನೂರಿನ ಸರಸ್ವತಿ ದೇವಾಲಯದ ವಿವಿಧ ಕಾರ್ಯ ಚಟುವಟಿಕೆಗಳಿಗೆ ಅಗ್ರಹಾರದ ಮಹಾಜನರ ಕೈಯಲ್ಲಿ ಅರಸು, ಅಧಿಕಾರಿಗಳು ದಾನದತ್ತಿ ನೀಡಿದ ವಿಷಯದೊಂದಿಗೆ ಅಲ್ಲಿಯ ಮೂಲಸ್ಥಾನ ದೇವರ ನೈವೇದ್ಯಕ್ಕೆ 'ಚತುರ್ವೇದಿಭಟ್ಟರ ತಿಪ್ಪೆ ಫೈಸಾಸನು ಅವನ ಅಳಿಯ ಶಂಕರವಿಕ್ರವಿನ್ತನು,' 500 ಕಮ್ಮ ಗದ್ದೆಯನ್ನು ಬಿಟ್ಟಿದ್ದು ಕುರಿತು ತಿಳಿಸುತ್ತದೆ. ಅದೇ ಶಾಸನದ ಮುಂದುವರೆದ ಭಾಗದಲ್ಲಿ 'ರುದ್ರಾದಿತ್ಯ ಫೈಸಾಸನು' ಅಗ್ರಹಾರ ಕುಕನೂರಿನ ಮೂಲಸ್ಥಾನ ದೇವರ ನೈವಿದ್ಯಕ್ಕೆ ಗದ್ದೆ 1 ಮತ್ತರ 100 ಕಮ್ಮ ಭೂಮಿ ಬಿಟ್ಟನೆಂದಿದೆ. ಆದೇ ಶಾಸನದ ನಾಲ್ಕನೆ ಭಾಗದಲ್ಲಿ ಮಲ್ಲಿಕಾರ್ಜುನ ದೇವರ ಬ್ರಹ್ಮಪುರಿಯ 15 ಮನುಷ ಬ್ರಾಹ್ಮಣರ್ಗ್ಗೆ ಮಾಚು ಎಡೆಹಳ್ಳಿಯ ಆದಾಯ ಬಿಟ್ಟರೆಂದು, ಕುಕನೂರಿನ ಬೇದವಟ್ಟೆ ಎಡೆಹಳ್ಳಿ, ಬಳ್ಳಿಂಗೆರೆ ಕೆರೆಯಿಂ; ಸಿರವುಣಸಿ ಊರುಗಳ ಸೀಮೆಯಲ್ಲಿ ಬರುವ ಹೊಲಗಳ ಆದಾಯದ ಅರ್ಧಭಾಗ ದೇವರಿಗೆ, ಇನ್ನರ್ಧ ಭಾಗ ಬ್ರಹ್ಮಪುರಿಯ ನಾರಾಯಣ ಭಟ್ಟೋಪಾಧ್ಯಾಯರು, ಪುರುಷೋತ್ತಮರುಂ, ಕಾಳಿದಾಸ ದೀಕ್ಷಿತರು ಚಂದ್ರಸೋಮ ಯಾಜ್ಯರು, ಮಹಾದೇವ ಭಟ್ಟೋಪಾಧ್ಯಾಯರು, ನರಸಿಂಹ ಭಟ್ಟೋಪಾಧ್ಯಾಯರು ರುದ್ರದೀಕ್ಷಿತರು, ಚೌಂಡಭಟ್ಟೋ ಪಾಧ್ಯಾಯರು ಆದಿತ್ಯಾಫೈಸಾಸರು ಹಾಗು ಅಲ್ಲಿಯ ಮಾದವದೇವ ಇನ್ನಿವರ್ಸಮಾನವಾಗಿ ಹಂಚಿಕೊಳ್ಳವುದೆಂದಿರುವುದು.

ಕ್ರಿ.ಶ. 1148ನೇ ಶಾಸನದಲ್ಲಿ 12 ವೇದಾಡ್ಯರಿಂದ ಯಜ್ಞದೀಕ್ಷಿತ ರಿಂದ ಶಾಸ್ತ್ರ ಪುರಾಣ, ತರ್ಕವಿದರಿಂದ ಕೂಡಿದ ಕುಕನೂರಿನ ಮಲ್ಲಿಕಾರ್ಜುನ ದೇವರಿಗೆ ಅಧಿಕಾರಿಗಳು, ಭಟ್ಟೋಪಾಧ್ಯಾಯ, ಗಂಗಾಧರಭಟ್ಟರು, ಇನ್ನಿತರ ಅಧಿಕಾರಿಗಳು, 'ಭಕುತ ವಿಷ್ಣು ಫೈಸಾಸರು' ಸೇರಿ ಹೊನ್ನು ಸಹಿತ ಭೂಮಿ, ಎಣ್ಣೆ, ಗದ್ದೆ ಇತ್ಯಾದಿಯಾಗಿ ದಾನ ಬಿಟ್ಟರೆಂದು ತಿಳಿಸುವುದು. ಅದರಂತೆ ಕ್ರಿ.ಶ. 1170ರ ಕಾಲದ ಕುಕನೂರಿನ ಶಾಸನದಲ್ಲಿ ಅರಸ ಕಳಚೂರಿಯರ ವಂಶಾವಳಿ, ಕವಿ ಸಜ್ಜನ ತಿಲಕ, ಸಾಸಿರ್ವರು, ಉಲ್ಲೇಖಿತ ಅರಸರು, ಅಧಿಕಾರಿಗಳು, ಅಗ್ರಹಾರ ಕುಕನೂರಿಗೆ ಬಂದು ಬೆಳ್ವಲನಾಡಿನ ಗಡಿಯಲ್ಲಿರುವ ಭೂಮಿ ಆದಾಯವನ್ನು ಮಲ್ಲಿಕಾರ್ಜುನ ದೇವರ್ಗೊಂದು ಭಾಗ ದೇವರ ಬ್ರಹ್ಮಪುರಿಗಳಪ್ಪ ಭೂಮೊವರ್ಗೊಂದು ಭಾಗ, ದೇವರ ಪೂಜೆ, ನೈವೇದ್ಯ ಅಂಗಭೋಗ ರಂಗಭೋಗಕ್ಕೆ ಬ್ರಾಹ್ಮಣರಿಗೆ – ಅರ್ಧಭಾಗ ಇನ್ನುಳಿದ ಅರ್ಧಭಾಗವನ್ನು ಕಸವಳ್ಳಿಯ ನಾರಾಯಣ ಭಟ್ಟೋಪಾಧ್ಯಾಯರು, ಸೋಮೇಶ್ವರ ಭಟ್ಟೋಪಾಧ್ಯಾಯರು ಕಾಳಿದಾಸ ಭಟ್ಟ ದೀಕ್ಷಿತರು, ವೇದಾನ್ತದ ಸೋಮೇಶ್ವರ ಭಟ್ಟೋಪಾಧ್ಯಾಯರು ಪುರುಷೋತ್ತಮ ಬಟ್ಟ, ಸೋಮಯಾಜ್ಯರು, ಮಾದೇವಭಟ್ಟೋಪಧ್ಯಾರು ಚಂದ್ರ ಸೋಮಯಾಜಿ, ಚೌನ್ಭಟ್ಟೋಪಾಧ್ಯಾಯರು 'ನಾರಾಯಣ ಘಳಿಸಾಸರು' ಹಿಟ್ಟಿಯ ಭಟ್ಟೋಪಾಧ್ಯಾಯರು ಪಟ್ಟವರ್ಧನ 'ಆದಿತ್ಯಘಳಿಸಾಸರು,' ಕೇಶವ ಭಟ್ಟೋಪಾಧ್ಯಾಯರು, ಹರಿಹರ ಭಟ್ಟರು, ಗೋವಿಂದ ಭಟ್ಟರು, ಬೆಣೆಯ ಮಾಧವಭಟ್ಟರು, ಯೋಗೇಶ್ವರ ಭಟ್ಟೋಪಾಧ್ಯಾಯರು 'ಶಂಕರಘಳಿಸಾಸರು' ಸೋಮೇಶ್ವರ ಘಳಿಸಾಸರು, ವಿಶ್ವೇಶ್ವರ ಘಳಿಸಾಸರು, ಶ್ರೀಧರ ಭಟ್ಟರು, ನಾರಾಯಣ ಷಡಂಗಿಯರು, ಶಿವದೇವರು, ಗೋವಿಂದ ದೇವರು, 'ಕೇಶವ ಘಳಿಸಾಸರು' ಇನ್ನಿವರ್

ಸಮನಾಂಶಮಾಗೆ ಹಚ್ಚಿಕೊಳ್ಳದು, ಆ ದೇಶದ ಮೇಲಾರೈಯದೇವರ ಬ್ರಹ್ಮಪುರಗಳಾರಯ್ದರು ಎಂದು ವಿವರಿಸುತ್ತದೆ. ಇನ್ನೊಂದು ಶಾಸನದಲ್ಲಿ ದೇಮೆಯಕಣಂಗಿಯ ಗಣೇಶ್ವರ ದೇವಾಲಯದಲ್ಲಿ ರುದ್ರಾದಿತ್ಯ ಘೈಸಾಸನು ಮಾಡಿಸಿದ ಸತ್ರದ ಮನೆಯಲ್ಲಿ ಪ್ರತಿದಿವಸವು 6 ಜನ ಬ್ರಾಹ್ಮಣರು ಊಟ ಮಾಡುವಂತೆ ಮತ್ತೆ 12 ಜನರು ಊಟ ಮಾಡಲು 'ರುದ್ರಾದಿತ್ಯ ಘೈಸಾಸನು' ಭೂಮಿದಾನ ನೀಡಿರುವುದಾಗಿ ತಿಳಿಸುತ್ತ ಕಡಲಗೆರೆಯ ಮತ್ತರು 22 ಕಮ್ಮ 600; ಮಹಾದೇವ ಘೈಸಾಸರು ಬಿಟ್ಟಿಕೆಯಿಂ ಘೈಸಾಸರ ಕೆರೆಯಂಗೆರ್ದೆ ಮತ್ತರು ಬೇರೆ ಬೇರೆಯವರು ದೇವರ ಬೇರೆ ಬೇರೆ ಕಾರ್ಯಗಳಿಗೆ ದಾನ ನೀಡಿರುವುದಾಗಿ ತಿಳಿಯುವುದು.

ಯಲಬುರ್ಗಿ ತಾಲೂಕಿನ 'ಇಟ್ಟಿಗೆ' ಶಾಸನದಲ್ಲಿ ಕಲ್ಯಾಣ ಚಾಲುಕ್ಯ ಅರಸ ತೈಲಪನಿಂದ 6ನೇ ವಿಕ್ರಮಾದಿತ್ಯನವರೆಗಿನ ವಂಶಾವಳಿಯಿಂದ ಪ್ರಾರಂಭಗೊಂಡ ಈ ಶಾಸನ ಬೆಳವಲ ನಾಡಿನ ನರೆಯಂಗಲ್ಲು 12ರಲ್ಲಿ ಬರುವ ಇಟ್ಟಿಗೆ ಅಗ್ರಹಾರದ ತೋಟ, ಗ್ರಾಮಶಾಸ್ತ್ರಜ್ಞರನ್ನು, 400 ಜನ ಬ್ರಾಹ್ಮಣರನ್ನು ಅವರ ವಿಶೇಷ ಕರ್ತವ್ಯಗಳನ್ನು ಎಣಿಸುವುದು. ಅಲ್ಲದೆ ಮಹಾದೇವ ದಂಡನಾಥನು ಇಟ್ಟಿಗೆಯಲ್ಲಿ 1. ತನ್ನ ಹೆಸರಿನಿಂದ ಈಶ್ವರ ದೇವಾಲಯ 2. ತಂದೆ ಹೆಸರಿನಿಂದ ನಾರಾಯಣ ದೇವಾಲಯ 3. ತಾಯಿಯ ಹೆಸರಿನಿಂದ ಚಂದ್ರಲೇಶ್ವರ ದೇವಾಲಯಗಳ, ಅಂಗಭೋಗ ರಂಗಭೋಗ, ಪ್ರಜೆ, ನೈವಿದ್ಯ ಪಾತ್ರವಳ, ಅನ್ನದಾನ ಭಟ್ಟವೃತ್ತಿ, ಘಳಿಯಾರ ಮುಂತಾದವುಗಳು ನಡೆಯುವಂತೆ 500 ಮತ್ತರು ಹೊಲ, ಅಳುಕಾಳಿಗಾಗಿ 25 ಮನೆಗಳನ್ನು ಕಟ್ಟಿಸುತ್ತಾನೆ ಮತ್ತು ಋಗ್ವದದ ಬಾಲಶಿಕ್ಷೆ ಯಜುರ್ವೇದ ಬಾಲಶಿಕ್ಷೆ ಮುಂತಾದವುಗಳಿಗೆ ದಾನ–ದತ್ತಿಗಳನ್ನು ಬಿಟ್ಟುಕೊಟ್ಟಿರುವುದಾಗಿ ಹೇಳುವುದು, ಮುಂದುವರೆದು ಮುದಿಯನೂರ ವಿಷ್ಣು ಘೈಸಾಸರ ಮನೆಯಿಂದ ಮೂಡ ಮುಖದೆಕ್ಕೈ 65 ಅಲ್ಲಿ ಮೂಡಲು ಬಟ್ಟೆಯಿಂ ತೆಂಕಲು 21ಕ್ಕೆ ನೀಳದ ಮೂಡ ಮುಖದೆ ತೆಲುಗರ ಮಾಗೆಯಕ್ರವಿತರ ಮುಟ್ಟಿಯಗಲಂ 76 ಅದರೊಳಗೆ ದೇವರ ನಂದಾದೀಪಕ್ಕೆ ಮನೆ ಸಹಿತಂ ಗಾಣ 2 ಹೀಗೆ ಅನೇಕ ರೀತಿಯ ದಾನದತ್ತಿಗಳು ಬಿಟ್ಟ ಬಗ್ಗೆ ಹೇಳುವುದು. ಮಾದನೂರಿನ ಶಾಸನದಲ್ಲಿ 15 ಅಗ್ರಹಾರ ಪುರುಷ ದೇವರ ಉಲ್ಲೇಖ ಬಂದಿದ್ದು ಮಾದೇನೂರು ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನವಾಗಿತ್ತೆಂದು ಶಾಸನಗಳಿಂದ ತಿಳಿಯುತ್ತದೆ. ಅಲ್ಲದೆ ಮಾದಿನೂರು ವಿಷ್ಣು ಸಾಸರು, ಚಟ್ಟೋಪಾಧ್ಯಾಯ ಸೋಮಯಾಜಿಯರ ಕುರಿತು ಹಾಗು ಘಟಿಕಾಸ್ಥಾನದ ಪೂರಕ ಮಾಹಿತಿ ಸಿಗುವುದು.

ಕುಷ್ಟಗಿ ತಾಲೂಕಿನ ಚಳಗೇರಿ ಶಾಸನದಲ್ಲಿ ಅರಸ ಕಳಚೂರಿ ಚಕ್ರವರ್ತಿ ರಾಯಮುರಾರಿ ಸೋವಿದೇವ ಕಿಸುಕಾಡು 70ನ್ನು ಆಳುತ್ತಿರುವಾಗ ಗೊಟ್ಟೂರು ಯಜ್ಞನಾರಾಯಣ ಭಟ್ಟೋಪಾಧ್ಯಾಯಗಳರೆಯ ಕೊಯಿಮತ್ತರು–10 ಹರಳು, ಮತ್ತರು–4, ವೆಂಗೆರೆಯ ನಾರಾಯಣ ಘಳಿಸಾಸರ್ಗ್ಗೆರೆಯ ಕೊಯಿಮತ್ತರು–4, ಹರಳಮತ್ತರು–2, ಖಂಡಕ್ಕೆರೆಯಕೆಯು ಮತ್ತರು 6 ಹರಳ ಮತ್ತರು 2, ಭೋಗವ ಘಳಿಸಾಸರ್ಗೆರೆಯ ಕೆಯ ಮತ್ತರು 6, ಹೊಳತೆಭಟರ್ಗೆರೆ ಕೆಯ ಮತ್ತರು 6, ಹೊಳತೆ ಭಟರ್ಗೆರೆ ಕೆಯ ಮತ್ತರು 6, ಹರಳು 2 ಮತ್ತರು 2, ವಾದಿಭಟ್ಟರ್ಗ್ಗೆರೆಯ ಮತ್ತರು 6 ಹರಳು ಮತ್ತರು 2 ದೇವನಾಯಕರ್ಗೆರೆಯ ಮತ್ತರು 6 ಹರಳು ಮತ್ತರು 2, ಘಳಿ ಸಾಸರ್ಗೆರೆಯ ಕೆಯಮತ್ತರು 4 ಹರಳ–2 ಇತ್ಯಾದಿಯಾಗಿ ದಾನದತ್ತಿ ಬಿಟ್ಟ ಉಲ್ಲೇಖದ ಜೊತೆಗೆ ಅಲ್ಲಿಯ ನಖರಿಗಳು ಪ್ರಜೆಗಳು, ಸುಂಕದ ಅಧಿಕಾರಿಗಳು, ಸಾಸಿರ್ವರು ಆಡಳಿತ ಅಧಿಕಾರಿಗಳು ಸೇರಿ ಚಳಗೇರಿಯ ಕಲ್ಲಂಗೆರೆಯ ಲಕ್ಷ್ಮೀ ನಾರಾಯಣ ದೇವರ ದೇವಾಲಯದ ಚೈತ್ರ ಪಾವಿತ್ರಕ್ಕೆ, ಪೂಜಾರಿಗೆ

ನಂದಾದೀಪಕೆ ಭೂಮಿಯ ಆದಾಯವನ್ನು ಮೇಲೆ ಉಲ್ಲೇಖಿತ ಬ್ರಾಹ್ಮಣರಿಗೆ ಹಂಚಿರುವ ದಾಗಿ ತಿಳಿಸುವುದು.16 ಇಲ್ಲಿ ಮುಖ್ಯವಾಗಿ ಗಮನಿಸುವು ದೇನಂದರೆ ಘಟಿಕಾಸ್ಥಾನದಲ್ಲಿರುವ ವಿದ್ವಾಂಸರ ಕೇರಿ (ಓಣಿಗಳು) ಗಳ ಬಗ್ಗೆ ಪ್ರಸ್ತಾಪ ಕಾಣುವುದರಿಂದ ಇಂದಿನ ಹಾಗೆ ಅವರಿಗೆ ಒಂದೇ ಕಡೆ ಇರಲು ಉಪಾಧ್ಯಾಯರ ಕ್ವಾಟರ್ಸ್ ಇದ್ದಹಾಗೆ ಅವರು ವಾಸಿಸುವ ಕೇರಿಗಳಾಗಿದ್ದವೆಂದು ತಿಳಿಯುತ್ತದೆ.

ಹೀಗೆ ಶಾಸನಗಳಲ್ಲಿ ಉಲ್ಲೇಖ ಬರುವ (ಘಳಿಸಾಸರು) ಘೈಸಾಸರು ಮತ್ತು ಅವರ ಹಿಂದಿನ ಹೆಸರುಗಳು ಅವರು ಪಡೆದ ವಿದ್ವತ್ತಿನ ಪದವಿ ಬಿರುದುಗಳಾಗಿ ಘಳಿಸಾಸರ್ಗೆರೆಯ, ಘಳಿಸರ್ಗೆರೆಯ (ಕೇರಿ) ಅಥವಾ ಓಣಿ ಅವರು ವಾಸಿಸುವ ಸ್ಥಳವಾಗಿರಬೇಕು. ಅಷ್ಟೊಂದು ವಿದ್ವಾಂಸರ ಗುಂಪು ಇಲ್ಲಿ ಇತ್ತೆಂದು ತಿಳಿಯುತ್ತದೆ. ಶಿಕ್ಷಣಕ್ಕೆ ಹೆಸರಾದ ಕೊಪ್ಪಳ ಜಿಲ್ಲೆ ಶಾಸನಗಳಲ್ಲಿ ಶಾಸನೋಕ್ತ ಕವಿಗಳ ಉಲ್ಲೇಖ ಬರುತ್ತಿದ್ದು ಸಾಹಿತ್ಯ ದೃಷ್ಟಿಯಿಂದಲೂ ಸಹ ಇಲ್ಲಿಯ ಶಾಸನಗಳು ಅಮೂಲ್ಯವಾಗಿವೆ. ಇದಕ್ಕೆಲ್ಲಾ ಈ ಪ್ರದೇಶದಲ್ಲಿ ಬರುವ ಶಿಕ್ಷಣ ಕೇಂದ್ರಗಳಾದ ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನಗಳು ಕಾರಣವಾಗಿವೆ. ಅವೆಲ್ಲವುಗಳು ಬೆಳೆಯಲು ಕಾರಣವಾದ ಇಲ್ಲಿಯ ಜನರು ತೋರಿದ ಉದಾರ ಭಾವನೆಗಳು ಮುಖ್ಯವಾಗಿವೆ. ಅಂತೆಯೇ ಘೈಸಾಸ ವಿದ್ವಾಂಸರ ಪ್ರಸ್ತಾಪಗಳು ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನಗಳಂಥ ಶಿಕ್ಷಣ ಕೇಂದ್ರಗಳ ಉಲ್ಲೇಖಗಳು ಇಲ್ಲಿ ಗಮನಹರಿಸಲಾಗಿದೆ.

ಒಟ್ಟಿನಲ್ಲಿ ಹೇಳಬೇಕೆಂದರೆ ಕೊಪ್ಪಳ ಜಿಲ್ಲೆಯಲ್ಲಿ ಸಹ ಘಟಿಕಾಸ್ಥಾನಗಳು ಇದ್ದು ಅಲ್ಲಿ ವಿದ್ವಾಂಸರೆಲ್ಲರು ಸೇರಿ ಚರ್ಚಿಸಿವಾದ, ಸ್ಪರ್ಧೆಗಳಲ್ಲಿ ತೊಡಗಿ ಜಯಶೀಲಗಳಾಗಿ ಪ್ರಸಿದ್ಧ ಗೊಂಡಿದ್ದರು ಮತ್ತು ಅವರು ಈ ಪ್ರದೇಶದಲ್ಲಿ ವಾಸಿಸುತ್ತಿದ್ದರು ಹಾಗು ಅವರಿಗೆ ಕೊಟ್ಟ ಶಾಸನಗಳು ದಾನ ದತ್ತಿಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ಇದರಿಂದ ಈ ಪ್ರದೇಶ ಶಿಕ್ಷಣಕ್ಕೆ ಹೆಸರಾಗಿದ್ದು, ವಿದ್ವಾಂಸರ ಬಳಗವೆ ಇಲ್ಲಿತ್ತು ಎಂದಾಗುತ್ತದೆ. ಹೀಗಾಗಿ ಅಧಿಕ ಸಂಖ್ಯೆಯಲ್ಲಿ ಘೈಸಾಸರ ಉಲ್ಲೇಖಗಳು ಶಾಸನಗಳಲ್ಲಿ ಕಾಣಿಸಿಕೊಂಡಿರುವುದನ್ನು ಆಧಾರವಾಗಿಟ್ಟುಕೊಂಡ ಶಿಕ್ಷಣದಲ್ಲಿ ಅವರ ಪಾತ್ರ ಏನು ಎಂಬುದು ತಿಳಿಯುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2., ಕೊಪ್ಪಳ ಜಿಲ್ಲೆಯ ಶಾಸನಗಳು, 1999,
2. ಎಂ.ಚಿದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು–223.
3. ಗೋಪಾಲರಾವ್ ಎಚ್. ಎಸ್., ಕಲ್ಯಾಣ ಚಾಲುಕ್ಯರ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ, ಪುಟ 163,
4. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಹನುಮನಾಳ ಶಾಸನ, 1999
5. ಟಿ. ಎಸ್. ವೆಂಕಣ್ಣಯ್ಯ, (ಸಂ), ಬಸವರಾಜ ದೇವರ ರಗಳೆ.